ಘಟ್ಯಾಗೇ ಹೇಳತೇನಿ" ಎಂದಾಗ ಕೇಶವ, "ಹಂಗ... ಹೆಂಗ ಅಷ್ಟು ಕಠಿಣಾಗಿ ಹೇಳ್ಲಿಕ್ಕಾಗ್ತದ? ಮನಿ ಹೆಣಮಗಳು ಅಕಿ..." ಎನ್ನುತ್ತ ತಡವರಿಸಿದ. "ಅಲ್ಲೇ ನೀವು ತಪ್ಪೋದು. ರುಕ್ಕೂಗೇನು ಸಣ್ಣ ವಯಸ್ಸ, ನಲವತ್ತಾತು. ಅಕಿಯಿಂದ ಎಷ್ಟು ಉಪಯೋಗಾಗ್ತದ ಇನ್ನ? ನಮ್ಮ ಮಕ್ಕಳ ತಲಿ ಮ್ಯಾಲೆ ಹೊರಿ ಅಕಿ. ಮುದುಕತನದಾಗ ಮಲಕೊಂಡ್ರ ಯಾರು ಮಾಡಾವ್ರು? ಭಿಡೆ ಬಿಟ್ಟು ಹೇಳ್ರಿ... ಇಲ್ಲಾ ನಾನ ಹೇಳ್ತೇನಿ. ತಿಳಿತಿಲ್ಲೋ?" ಎಂದು ಹ್ಞೂಂಕರಿಸಿದಾಗ ಕೇಶಣ್ಣ, "ಹ್ಞೂಂ... ಊಂ..." ಎಂದಿದ್ದ.

ಕರೆಂಟಿನ ಶಾಕ್ ಹೊಡೆಸಿಕೊಂಡಂತಾಗಿ ಮೈಯೆಲ್ಲ ಝಿಲ್ಲನೆ ಬೆವೆತಿತು. ನಿಲ್ಲಲೂ ತ್ರಾಣವಿಲ್ಲದಂತಾಗಿ ತಡಕಾಡುತ್ತ ಕೋಣೆಗೆ ಹಿಂದಿರುಗಿ ಜಾಜಿಕಾಯಿಯ ಚೂರನ್ನು ಹಾಗೆಯೇ ಬಾಯಿಗೆಸೆದುಕೊಂಡು ಅಗಿದು ನೀರು ಕುಡಿದೆ. ಕಣ್ಣೀರು ಉರುಳಿ ದಿಂಬನ್ನೆಲ್ಲ ತೋಯಿಸಿದವು. 'ಕಡದು ಬುಟ್ಟಿ ತುಂಬಿಡ್ರಿ'... ಎಂಥ ಮಾತು? ತಮ್ಮ ಮಕ್ಕಳ ಬಾಣಂತನ ಮಾಡಿಸಿಕೊಳ್ಳುವಾಗ, ತಮಗೆ ಸೌಖ್ಯವಿಲ್ಲದೇ ಹಾಸಿಗೆ ಹಿಡಿದು ಮಲಗಿದಾಗ... ತೊಳೆಯುವುದು, ಬಳಿಯುವುದರಿಂದ ಹಿಡಿದು ಎಲ್ಲ ಮಾಡಿದ್ದೆ. ಅದಕ್ಕೆ ಪ್ರತಿಫಲವಿದು. ಜಗತ್ತೇ ಹೀಗಲ್ಲವೆ? ಅವ್ವನ ನೆನಪಾಯಿತು. "ನಾವಿರೋತನಕಾ ಎಲ್ಲಾ ನಡೀತದವಾ. ಮುಂದ ನಿನ್ನ ಗತಿ ಏನು? ಈ ರಾಧಾ ಬೇಕಾದ್ರ ಗಂಡನ್ನ ಮಳ್ಳ ಮಾಡಿ ನಿನ್ನ ಜೀವಂತ ಹುಗೀಲಿಕ್ಕೂ ಸೈ" ಎಂದಿದ್ದಳು. "ಅವ್ವಾ, ನೀ ಚಿಂತಿ ಮಾಡಬ್ಯಾಡಾ. ದೊಡ್ಡಣ್ಣ, ರಮಾ ವೈನಿ ಇದ್ದಾರಲಾ... ಅವರೆಲ್ಲಾ ನೋಡಕೋತಾರ. ನನ್ನ ಕೈ ಬಿಡೂದುಲ್ಲಾ. ನೀ ಕಾಳಜಿ ಮಾಡಬ್ಯಾಡಾ" ಎಂದಿದ್ದೆ. ಅವ್ವ ದೊಡ್ಡದಾಗಿ ನಿಟ್ಟುಸಿರು ಬಿಟ್ಟಿದ್ದಳು. ಈಗ ಎಲ್ಲರೂ ಕೈ ಬಿಟ್ಟರಲ್ಲ... ಎನಿಸಿ ಸಣ್ಣಗೆ ಬಿಕ್ಕಿದೆ.

ನಾನು ಸುಂದರಿಯಲ್ಲದಿದ್ದರೂ ಕುರೂಪಿಯೇನಲ್ಲ. ಬಲಗೆನ್ನೆಯ ಮೇಲಿನ ರೂಪಾಯಿ ಅಗಲದ ಕಪ್ಪು ಮಚ್ಚೆ ನನ್ನೆಲ್ಲ ಸೌಂದರ್ಯವನ್ನೂ ನುಂಗಿ ಹಾಕಿತ್ತು. ಗೌರವರ್ಣದಲ್ಲಿ ಅಗಲವಾದ ಕಣ್ಣಗಳು, ಸಂಪಿಗೆಯ ಮೂಗು, ದಾಳಿಂಬೆಯ ದಂತಪಂಕ್ತಿ ಕಾಣಲೇ ಇಲ್ಲ. ಸೊಂಟ ದಾಟುವ ನಿಡುಜಡೆ ತೂಗಾಡಲೇ ಇಲ್ಲ. ನಾನು ಹಾಕುತ್ತಿದ್ದ ದೊಡ್ಡ ದೊಡ್ಡ ಗಂಟಿನ ರಂಗೋಲಿಗಳನ್ನು ದಾರಿಹೋಕರೂ ಕ್ಷಣ ನಿಂತು ನೋಡಿ ಹೋಗುವುದಿತ್ತು. ಅಪ್ಪ, ಅವ್ವರಿಗೆ ಹೆಮ್ಮೆ. ನವರಾತ್ರಿಯಲ್ಲಿ ದಶಾವತಾರದ ರಂಗೋಲೆಯನ್ನು ದೇವಸ್ಥಾನದಲ್ಲಿ ಬಿಡಿಸುತ್ತಿದ್ದೆ. ನೋಡಲು ಸುತ್ತಣ ಹಳ್ಳಿಗಳ ಜನ ಕೂಡ ಬಂದು ಪ್ರಶಂಸಿಸುತ್ತಿದ್ದರು. "ಅಕಿ ರಂಗೋಲಿ ನೋಡಿನ ಅಕಿನ್ನ ಯಾರರೆ ಮಾಡಕೊಂಡು ಹೋಗ್ತಾರ" ಎಂದು ಬೀಗುತ್ತಿದ್ದ ಅಪ್ಪ. ಕಸೂತಿಯಲ್ಲೂ ನಿಪುಣೆ. ಮೇಜಿನ ಮೇಲೆ, ಬಾಗಿಲ ಪರದೆ, ಕುರ್ಚಿಗಳ ಮೇಲೆ ನಾನು ಹಾಕಿದ ಹೂವಿನ ಚಿತ್ತಾರಗಳು ನಗುತ್ತಿದ್ದವು. ಆದರೆ, ಇವಾವೂ ಆಶ್ಲೇಷಾ ನಕ್ಷತ್ರದ ಪ್ರಭಾವವನ್ನು ಕುಗ್ಗಿಸುವಲ್ಲಿ ಯಶಸ್ವಿಯಾಗಲಿಲ್ಲ. 'ಅತ್ತಿ ಇಲ್ಲದ ಮನಿ' ಎಂಬ ಹಣೆಪಟ್ಟಿ ಅಂಟಿಕೊಂಡಿತ್ತು. ಅದೇ ಪೆಟ್ಟು ಕೊಟ್ಟಿದ್ದು ನನಗೆ. ಗೆಳತಿಯರು, "ಒಂದು ರೀತಿಯೊಳಗ ಛೊಲೊ ಬಿಡು. ಅತ್ತಿ ಕಾಟ ಇಲ್ಲ" ಎಂದು ಪಿಸುಗುಟ್ಟಿ ನಕ್ಕರೆ ತಪ್ಪೋ ಸರಿಯೊ ತಿಳಿಯದ ಅಮೂರ್ತ ಭಾವ.

ಅದೇನು ಅಂಥ ದೊಡ್ಡ ಸಮಸ್ಯೆಯಲ್ಲ ಎನ್ನಲು ಇದು ನಗರವಲ್ಲ. 'ಉಗಾರ' ಎಂಬ ಚಿಕ್ಕ ಹಳ್ಳಿ. ಈಗಿನ ಕಿತ್ತೂರು ಚೆನ್ನಮ್ಮಾ ಎಕ್ಸ್‌ಪ್ರೆಸ್ ಅಂದು ಕರ್ನಾಟಕ ಎಕ್ಸ್‌ಪ್ರೆಸ್ ಎಂದು ಕರೆಸಿಕೊಂಡು ಬೆಂಗಳೂರಿನಿಂದ ಹೊರಟು ಮಿರಜ್ ತಲುಪುತ್ತಿತ್ತು. ಬೆಳಗಾವಿಯಿಂದ ಮುಂದೆ ಸಾಗಿದಾಗ 'ಉಗಾರ ಖುರ್ದ' ಎಂದು ಬರೆದ ನಿಲ್ದಾಣ ಕಾಣುತ್ತಿತ್ತು. ರೈಲಿನಿಂದ ಇಳಿಯಲು ನಮಗೆ ಪ್ಲಾಟ್‌ಫಾರ್ಮ ಸಿಕ್ಕಿದ್ದೇ ಕಡಿಮೆ. ಮುಂದೆ ಹೋಗಿ ನಿಲ್ಲುತ್ತಿದ್ದುದರಿಂದ ಇಳಿಯುವವರೆಲ್ಲ ಜಿಗಿಯುವುದೇ. ಸಕ್ಕರೆ ಕಾರ್ಖಾನೆ ಇದ್ದುದರಿಂದ ಏನೋ ಒಂಥರಾ ಕೆಟ್ಟ ವಾಸನೆ. ಸುತ್ತ ದೂರದ ಊರುಗಳಿಂದ ಲಾರಿಗಳಲ್ಲಿ ಕಾರ್ಖಾನೆಗೆ ಕಬ್ಬು ಹೊಡೆದುಕೊಂಡು ಬರುವ ಜನ. ಬಿಸಿಲು ಸದಾ ರಣಗುಡುತ್ತಿತ್ತು. ಇತ್ತ ಕರ್ನಾಟಕದ ಬೆಳಗಾವಿ ಅತ್ತ ಮಹಾರಾಷ್ಟ್ರದ ಮಿರಜ್ ಮಧ್ಯೆ ತೂಗುಯ್ಯಾಲೆ ಆಡುತ್ತಿದ್ದ